

ಹಿಂದು ಮುಂದು ನೋಡದೆ ಬಂದವರ ಹಿಂದೆಯೇ ನಿಂತ ನಿಲುವಿನಲ್ಲೇ ಹೊರಟ. 'ಅಷ್ಟು ಮಾಡಪ್ಪ ಚಿಕ್ಕರಾಮ, ಇವತ್ತು ನಮ್ಮ ಮಗೀನ ಪ್ರಾಣ ಉಳಿಸೋ ಕೆಲಸ ನಿನ್ನ ಪಾಲಿಗೆ ಬಂದೈತೆ. ನಾಳೆ ನಿನ್ನ ಮಗೀಗೂ ಒಳ್ಳೆದಾಗೋ ದಿನವೂ ಬತ್ತೈತೆ...' ಎಂದು ಬಂದವರು ಹೇಳಿದ ಮಾತುಗಳು ಚಿಕ್ಕರಾಮನ ಕಿವಿಗಳಿಗೆ ತಲುಪಲೇ ಇಲ್ಲ. ಅಲ್ಲಿಂದ ಕ್ಷಣ ಮಾತ್ರದಲ್ಲಿ ಒಂದೇ ಉಸುರಿಗೆ ದೊಡ್ಡ ಬಾವಿ ಕಡೆಗೆ ದೌಡಾಯಿಸಿದ.

ಮುನಿಯಪ್ಪನವರ ದೊಡ್ಡ ಬಾವಿ ಬಳಿಗೆ ಚಿಕ್ಕರಾಮ ಒಂದೇ ನೆಗೆತಕ್ಕೆ ಬಂದು ತಲುಪಿದ. ಸುತ್ತಲೂ ನೋಡಿದ. ಅಲ್ಲಿ ಆಗಲೇ ಜನ ಬಾವಿಯ ಸುತ್ತ ನೆರೆದಿತ್ತು. ಗೊತ್ತಿರುವ ಮುಖಗಳಿಗಿಂತ, ಗೊತ್ತಿಲ್ಲದಿರುವ ಮುಖಗಳೇ ಅಲ್ಲಿ ಹೆಚ್ಚಾಗಿದ್ದವು! ಯಾರೊಬ್ಬರೂ ಬಾವಿಯೊಳಗೆ ಇಳಿಯುವ ಧೈರ್ಯ ಮಾಡದೆ ತಲೆಗೊಂದು ಮಾತನಾಡುತ್ತಾ ನಿಂತಿದ್ದರು. ಚಿಕ್ಕರಾಮ ಯಾವಾಗ ಅಲ್ಲಿಗೆ ಬಂದನೋ, ಎಲ್ಲರ ದೃಷ್ಟಿಯೂ ಅವನ ಮೇಲೆಯೇ ನಿಂತಿತು. ಇದ್ದಕ್ಕಿದ್ದ ಹಾಗೆ ಮೌನವೆಂಬುದು ಅದೆಲ್ಲಿತ್ತೋ ಗಾಳಿಯಂತೆ ಬಂದು ಅಲ್ಲಿನ ವಾತಾವರಣವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಮಾತೆಂಬುದು ಬತ್ತಿಹೋಗಿ, ಜನ ಉಸಿರಾಡುವುದು ಮಾತ್ರ ಕೇಳಿಬರುತ್ತಿತ್ತು. ಒಂದು ಎಲೆಯೂ ಅಲುಗಾಡುತ್ತಿರಲಿಲ್ಲ. ಸೂರ್ಯನ ಹೊಳಪು ಕಂದಿತ್ತು. ಚಿಕ್ಕರಾಮ ದೊಡ್ಡ ಬಾವಿಯ ಬಳಿಗೆ ಬರುತ್ತಿದ್ದಂತೆಯೇ, ಬಾವಿ ಕಟ್ಟೆ ಮೇಲೆ ನಿಂತು ಉಟ್ಟ ಬಟ್ಟೆಯಲ್ಲೇ 'ದಡಾರ್...' ಎಂದು ಬಾವಿಗೆ ಜಿಗಿದ. ಅವನು ಜಿಗಿದ ಜಿಗಿತಕ್ಕೆ ಬಾವಿಯ ನೀರು ಸೀಳಿ ಅವನನ್ನು ಒಳಗೆ ಕರೆದುಕೊಂಡಿತು.

ಒಂದು ಕ್ಷಣ ಜನರ ಉಸಿರಾಟವೂ ನಿಂತಿತು.

ಎಷ್ಟು ಹೊತ್ತಾದರೂ ಚಿಕ್ಕರಾಮ ಬಾವಿಯ ಮೇಲಕ್ಕೆ ಬರಲೇ ಇಲ್ಲ. ಸ್ವಲ್ಪ ಹೊತ್ತಿನ ನಂತರ ರಕ್ತ ಬೆರೆತ ನೀರಿನ ಗುಳ್ಳೆಗಳು ಮೇಲೇಳತೊಡಗಿದವು. ಕಪ್ಪಗಿದ್ದ ಬಾವಿಯ ನೀರು ನಿಧಾನವಾಗಿ ಕೆಂಪಾಗತೊಡಗಿತು. ಪಡುವಲದಲ್ಲಿ ಸೂರ್ಯ ಕುಲುಮೆಯೊಳಗಿನ ಕೆಂಡದಂತೆ ಹೊಳೆಯುತ್ತಾ ಕರಗುತ್ತಿದ್ದ.

ಚೂಪು ಮಾಡಿದ ಬಿದಿರು ಗಳಗಳನ್ನು ಬಾವಿಯಲ್ಲಿ ನೆಟ್ಟಿದ್ದರಿಂದ ಚಿಕ್ಕರಾಮ ಬಿದ್ದ ರಭಸಕ್ಕೆ ಅವೆಲ್ಲ ಅವನ ದೇಹಕ್ಕೆ ಆಳವಾಗಿ ನಾಟಿಕೊಂಡಿದ್ದವು. ಅಂದಿನಿಂದ ಆ ಸುತ್ತಿನ ಹಳ್ಳಿಗಳಲ್ಲಿ ಕಳ್ಳತನ ನಡೆಯುವುದು ನಿಂತಿತು. ಪೊಲೀಸರು ಬಂದು ಪಂಚನಾಮೆ ಮಾಡಿ, ಇದೊಂದು 'ಆತ್ಮಹತ್ಯೆ' ಎಂದು ಬರೆದು ಊರಿನವರಿಂದ ಹೆಬ್ಬೆಟ್ಟು ಒತ್ತಿಸಿಕೊಂಡರು. ಮಾಸ್ತಮ್ಮನ ಕಣ್ಣೀರನ್ನು ಒರೆಸಲು ಯಾವ ಕೈಗಳೂ ಮುಂದಾಗಲಿಲ್ಲ. ಆದರೆ ಊರಿನ ಹೊರಚ್ಚಿಗಿದ್ದ ಎರಡು ಜೀವಗಳು ಮಾತ್ರ ಮಾಸ್ತಮ್ಮನ ದುಃಖವನ್ನು ಶಮನ ಮಾಡಲು ಮುಂದಾವು.

ತಮ್ಮ ಮನೆಯ ಮುಂದಿನ ಜಗುಲಿಯ ಮೇಲೆ ನರಸಿಂಹಯ್ಯನವರು ಏಕಾಂಗಿಯಾಗಿ ಕುಳಿತಿದ್ದರು. ಒಳಗೆ ಹಚ್ಚಿಟ್ಟಿದ್ದ ದೀಪವೂ ಅವರಂತೆಯೇ ಮಂಕಾಗಿ ಉರಿಯುತ್ತಿತ್ತು. ಮೊಮ್ಮಗಳು ನಾಗಮ್ಮ ಮಂದವಾಗಿ ಉರಿಯುತ್ತಿದ್ದ ದೀಪದ ಬೆಳಕಿನಲ್ಲಿ ಕುಳಿತು ಓದುತ್ತಿತ್ತು. ನರಸಿಂಹಯ್ಯನವರ ಸಾತ್ವಿಕ ಮುಖದ ಮೇಲೆ ಹೇಳಲಾಗದ ನೋವು, ವಿಷಾದ ಮಡುಗಟ್ಟಿತ್ತು. ಊರಿನವರೆಲ್ಲಾ ಸೇರಿ ಚಿಕ್ಕರಾಮನನ್ನು ವ್ಯವಸ್ಥಿತವಾಗಿ ಕೊಲೆ ಮಾಡಿದರು. ಹೇಗೆ ನೋಡಿದರೂ ಇದೊಂದು ಹತ್ಯೆ. 'ಸೇರೋಅಚ್ಚೇರೋ ರಾಗಿ, ಒಂದೆರೆಡು ತೆಂಗಿನಕಾಯಿ, ಉಪ್ಪು, ಹುಳಿ ಕದಿಯೋನಿಗೆ ಕೊಲೆ ಶಿಕ್ಷೆಯೆ?...' ಅವರ ಎದೆ ನಡುಗಿತು. ಅವರ ಮುಖದ ಮೇಲೆ ನಿಂತಿದ್ದ